# ಜನರ ಜೀವನ ಗುಣಮಟ್ಟ ಹೆಚ್ಚಿಸಲು ನಾಗರಿಕ ಸೇವೆ ಸಹಾಯಕ

**2023ರ ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ 686ನೇ ರ‍್ಯಾಂಕ್ ಪಡೆದ ರಾಹುಲ್ ಆರ್ ಅವರ ಸಂದರ್ಶನ**

■ ರಾಘವೇಂದ್ರ ಕೆ.



◆ **ನಿಮ್ಮ ಪರಿಚಯ ಹೇಳಿ**

ವೃತ್ತಿಯಿಂದ ವೈದ್ಯ. ತಂದೆ: ಎಂ.ಪಿ. ರಮೇಶ್, ರಾಜ್ಯ ಮಾಹಿತಿ ಆಯೋಗದ ಆಯುಕ್ತರಾಗಿ ನಿವೃತ್ತರಾಗಿದ್ದಾರೆ. ಅಮ್ಮ: ಎ.ಆರ್. ಮಂಗಳಾ, ತಂಗಿ: ಉನ್ನತಿ 8ನೇ ತರಗತಿ ಓದುತ್ತಿದ್ದಾಳೆ. ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 2009ರಲ್ಲಿ ಎಂ.ಬಿ.ಬಿ.ಎಸ್. ಅಧ್ಯಯನ ಮಾಡಿದೆ. ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯನ್ನು 2016ರಿಂದ ಬರೆಯುತ್ತಿದ್ದೇನೆ. 2023ರ 5ನೇ ಪ್ರಯತ್ನದಲ್ಲಿ 686ನೇ ರ‍್ಯಾಂಕ್ ಪಡೆದಿದ್ದೇನೆ.

◆ **ಅಧಿಕಾರಿ ಆಗುವುದರಿಂದ ವೈದ್ಯಕೀಯ ವೃತ್ತಿಗೆ ನ್ಯಾಯ ಒದಗಿಸಲು ಆಗುತ್ತಿಲ್ಲ ಅನ್ನಿಸುತ್ತಾ?**

ಖಂಡಿತ ಇಲ್ಲ. ವೈದ್ಯನಾಗಿ ಜನಸೇವೆ ಮಾಡುತ್ತೇನೆ. ಆದರದು ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾತ್ರ. ಇದೇ ಕ್ಷೇತ್ರದಲ್ಲಿ ಬೆಳೆದರೆ ಮುಂದೆ ಮೆಡಿಕಲ್ ಸೂಪರಿಂಟೆಂಡೆಂಟ್ (superintendent) ಸ್ಥಾನದವರೆಗೂ ಬೆಳೆಯಬಹುದಿತ್ತು. ವೈದ್ಯಕೀಯ ಕ್ಷೇತ್ರದ ಆಡಳಿತವನ್ನು ನಿರ್ವಹಿಸಬಹುದು. ಆದರೆ ಇದು ಸೀಮಿತವಾಗುತ್ತದೆ. ನಾಗರಿಕ ಸೇವಾ ಕ್ಷೇತ್ರಕ್ಕೆ ಬಂದರೆ ಅದರಲ್ಲಿ ಆರೋಗ್ಯ ಒಂದು ಭಾಗ. ಇದು ಇಂತಹ ಹಲವು ಕ್ಷೇತ್ರಗಳನ್ನು ಒಳಗೊಂಡಿದೆ. ವಿಸ್ತಾರವಾದ ವ್ಯಾಪ್ತಿ ಇದಕ್ಕಿದೆ. ವೈದ್ಯನಾಗಿ ರೋಗಕ್ಕೆ ಚಿಕಿತ್ಸೆ ನೀಡಬಹುದು. ಐಎಎಸ್ ಆದರೆ, ನಾಗರಿಕರ ಜೀವನದ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಅವಕಾಶ ಪಡೆದಂತೆ ಆಗುತ್ತದೆ. ಈ ಬಾರಿ ನನಗೆ ಭಾರತೀಯ ರೆವಿನ್ಯೂ ಸರ್ವೀಸ್ ಸಿಗಬಹುದು. ಇನ್ನೂ ಒಮ್ಮೆ ಪರೀಕ್ಷೆಯನ್ನು ಬರೆಯುತ್ತೇನೆ.

◆ **ಪರೀಕ್ಷಾ ಸಿದ್ಧತೆ ಹೇಗಿರಬೇಕು?**

ಪೂರ್ವಭಾವಿ ಪರೀಕ್ಷೆಗೆ ತುಂಬ ಪುಸ್ತಕ ಓದುವ ಪ್ರಯತ್ನವನ್ನು ಮಾಡುತ್ತೇವೆ. ನನ್ನ ಪ್ರಕಾರ ಅಷ್ಟು ಅಗತ್ಯ ಇಲ್ಲ. ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ಅವಲೋಕನ ಮಾಡಿ ಅಧ್ಯಯನ ರೂಪಿಸಿಕೊಳ್ಳಬೇಕು. ಎರಡು ತಿಂಗಳ ಕಾಲ ಕುಳಿತು ಓದಿದರೆ ಸಾಕು. ಪ್ರಚಲಿತ ವಿದ್ಯಮಾನಕ್ಕೆ ಸಂಬಂಧಪಟ್ಟಂತೆ ಹಲವು ಪುಸ್ತಕ, ಹಲವು ಪತ್ರಿಕೆಗಳ ಓದು ಅನಗತ್ಯ. ನಿರ್ದಿಷ್ಟವಾದ ಪಠ್ಯವನ್ನು ಹೊಂದಿಸಿಕೊಳ್ಳುವುದು ಯಶಸ್ವಿನ ಮೊದಲ ಸೂತ್ರ. ಯಾವುದನ್ನು ಓದಬೇಕು. ಯಾವ ಕ್ಷೇತ್ರಕ್ಕೆ ಒತ್ತುಕೊಟ್ಟು ಪ್ರಶ್ನೆ ಕೇಳುತ್ತಾರೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಮುಖ್ಯಪರೀಕ್ಷೆಗೆ ಹೆಚ್ಚು ಸ್ಕೋರ್ ಮಾಡಲು ಅವಕಾಶ ಇರುವ ನಮ್ಮ ಇಷ್ಟದ ವಿಷಯವನ್ನೇ ಆಯ್ಕೆ ಮಾಡಿಕೊಳ್ಳಬೇಕು. ಪ್ರಚಲಿತ ವಿದ್ಯಮಾನ ಅರಿಯಲು ರಾಷ್ಟ್ರೀಯಮಟ್ಟದ ಒಂದು ಇಂಗ್ಲಿಷ್ ಪತ್ರಿಕೆ, ಸ್ಥಳೀಯ ವಿವರಕ್ಕೆ 'ಪ್ರಜಾವಾಣಿ' ಓದಬಹುದು. ಇದು ಸಂದರ್ಶನದ ಸಂದರ್ಭದಲ್ಲಿ ತುಂಬ ಸಹಾಯಕ್ಕೆ ಬರುತ್ತದೆ. ಇತಿಹಾಸಕ್ಕೆ ಸಂಬಂಧಿಸಿದಂತೆ ತಮಿಳುನಾಡಿನಲ್ಲಿ ಪಿಯುಸಿ ಪಠ್ಯ ಚೆನ್ನಾಗಿದೆ.

◆ **ನೀವು ವೈದ್ಯಕೀಯ ವಿಜ್ಞಾನವನ್ನು ಐಚ್ಛಿಕ ವಿಷಯವಾಗಿ ಏಕೆ ಓದಲಿಲ್ಲ?**

ವೈದ್ಯಕೀಯ ವಿಜ್ಞಾನದಲ್ಲಿ ಮೊದಲಬಾರಿ ವಿಫಲನಾಗಿದ್ದೆ. ಮಾನವಶಾಸ್ತ್ರ (Anthropology) ಸ್ಕೋರಿಂಗ್ ವಿಷಯ. ಸುಲಭವಾಗಿ ಅರ್ಥವಾಗುತ್ತದೆ ಎನ್ನುವ ಕಾರಣಕ್ಕೆ ಆಯ್ಕೆ ಮಾಡಿಕೊಂಡೆ. ಈ ಪಠ್ಯ ಎರಡು ಭಾಗವನ್ನು ಒಳಗೊಂಡಿದೆ. ಒಂದು ಜೀವಶಾಸ್ತ್ರಕ್ಕೆ ಸಂಬಂಧಿಸಿದ ಭಾಗ. ಮತ್ತೊಂದು ಸಂಸ್ಕೃತಿಗೆ ಸಂಬಂಧಿಸಿದ ಭಾಗ. ವೈದ್ಯನಾಗಿ ಜೀವಶಾಸ್ತ್ರ ಗೊತ್ತಿತ್ತು. ಸಂಸ್ಕೃತಿಯ ಭಾಗ ಅರಿಯುವ ಅಗತ್ಯ ಇತ್ತು. ಅದು ಆಸಕ್ತಿದಾಯಕವಾಗಿತ್ತು. ಜಾತಿ–ಬುಡಕಟ್ಟುಗಳ ಅಸ್ತಿತ್ವ–ಸಮಸ್ಯೆಗಳನ್ನು ತಿಳಿಯುವ ಕುತೂಹಲ ಹೆಚ್ಚಾಯಿತು. ಪರೀಕ್ಷೆಯನ್ನು ಪಾಸಾದ ನಮ್ಮ ಹಿರಿಯರ ಮಾರ್ಗದರ್ಶನ ಕೂಡ ನನ್ನ ಐಚ್ಛಿಕ ವಿಷಯ ಆಯ್ಕೆ ನಿರ್ಧರಿಸಲು ಸಹಕಾರಿಯಾಗಿದೆ.

ಮೊದಲ ಯತ್ನದಲ್ಲೇ ಪೂರ್ವಭಾವಿ ಪರೀಕ್ಷೆ ಪಾಸಾಗಿದ್ದೆ. ಮುಖ್ಯ ಪರೀಕ್ಷೆಯಲ್ಲಿ ಮೆಡಿಕಲ್ ಸೈನ್ಸ್ ತೆಗೆದುಕೊಂಡಿದ್ದೆ. ಅಪ್ಪ ಬೇಡ ಅಂದಿದ್ರು. ಪರೀಕ್ಷೆ ಬರೆದ ಮೇಲೆ ಯಡವಟ್ಟು ಮಾಡಿಕೊಂಡೆ ಅನ್ನಿಸಿತು. ಹಾಗಾಗಿ ಎರಡನೇ ಪ್ರಯತ್ನದಿಂದ ಮಾನವಶಾಸ್ತ್ರವನ್ನು ತೆಗೆದುಕೊಂಡೆ. ವೈದ್ಯಕೀಯ ವಿಜ್ಞಾನ ಏಕೆ ಕಷ್ಟ ಅಂದರೆ, ನಾನು ಎಂಬಿಬಿಎಸ್ ಮಾಡಿದ್ದೇನೆ; ಪರೀಕ್ಷೆಗೆ ಎಂ.ಎಸ್., ಎಂ.ಡಿ. ಅಲ್ಲದೆ ವೈದ್ಯಕೀಯ ವಿಜ್ಞಾನದ ಕೆಲವು ಕ್ಷೇತ್ರದಲ್ಲಿ ವಿಶೇಷ ಪ್ರಾವೀಣ್ಯ ಪಡೆದವರೂ ಇರುತ್ತಾರೆ. ವೈದ್ಯಕೀಯ ವಿಜ್ಞಾನದಲ್ಲಿ ಒಟ್ಟು 19 ವಿಷಯಗಳ ಪ್ರತ್ಯೇಕ ಪಠ್ಯ ಇರುತ್ತದೆ. ಪರೀಕ್ಷೆಯ ಸಿದ್ಧತೆಗೆ ಈ ಪ್ರಮಾಣದ ಅಧ್ಯಯನ ಸಾಮಗ್ರಿಯನ್ನು ಹೊಂದಿಸುವುದು ಮತ್ತು ಓದುವುದು ಕಷ್ಟ. ಮಾನವಶಾಸ್ತ್ರವನ್ನು ವಿಶೇಷ ಅಧ್ಯಯನ ಮಾಡಿರುವವರ ಪ್ರಮಾಣ ಕಡಿಮೆ. ವೈದ್ಯಕೀಯ ವಿಜ್ಞಾನಕ್ಕೆ ಹೋಲಿಸಿದರೆ ಪಠ್ಯದ ವ್ಯಾಪ್ತಿ ತುಂಬ ಕಡಿಮೆ.

◆ **ಸಂದರ್ಶನದಲ್ಲಿ ವಸ್ತುನಿಷ್ಠವಾಗಿ ಉತ್ತರಿಸುವುದು, ಆಯ್ಕೆಗೆ ಅಡ್ಡಿ ಆಗಬಹುದು ಎಂಬ ಅನುಮಾನ ಕಾಡುವುದಿಲ್ಲವೆ?**

ಸಂದರ್ಶನಕ್ಕೆ ಹೋಗುವ ಮುಂಚೆ ಸ್ವಯಂ ಸಿದ್ಧತೆಯನ್ನು ಮಾಡಿಕೊಂಡಿದ್ದೆ. ಇಂತಹ ಪ್ರಶ್ನೆಗಳು ಉದ್ಭವ ಆಗಹುದು ಎಂಬ ನಿರೀಕ್ಷೆ ಇತ್ತು. ವಿವಾದಾತ್ಮಕ ಪ್ರಶ್ನೆಗಳು ಎದುರಾದಾಗ ಸಂವಿಧಾನದ ಮೂಲತತ್ವಗಳಿಗೆ ಬದ್ಧನಾಗಿ ಉತ್ತರಿಸಬೇಕು ಎಂದುಕೊಂಡಿದ್ದೆ. ಏನೇ ಇರಲಿ, ಸಂವಿಧಾನ ಮಾತ್ರ ಶಾಶ್ವತ, ಅದರ ಮೌಲ್ಯಗಳನ್ನು ಆಧರಿಸಿ ನಾನು ಉತ್ತರಿಸಿದೆ.

ಸಂದರ್ಶಕರು ನನಗೆ 'ಪಿಎಂ ಕೇರ್ ಫಂಡ್ ಅಂದರೆ ಏನು' ಎಂದು ಕೇಳಿದರು. ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರಿಂದ ಧನ ಸಂಗ್ರಹಿಸಿ ಪರಿಣಾಮಕಾರಿಯಾಗಿ ವೈದ್ಯಕೀಯ ನೆರವು ನೀಡಲು ಸ್ಥಾಪನೆ ಮಾಡಿದ ನಿಧಿ ಅಂದೆ. 'ಅದರ ವಿವಾದದ ಬಗ್ಗೆ ಹೇಳಿ' ಎಂದರು. ವಿರೋಧಪಕ್ಷಗಳು ಮತ್ತು ಸಾರ್ವಜನಿಕ ವಲಯದಲ್ಲಿ ಅದರ ಉತ್ತರಾದಾಯಿತ್ವ (Accountability) ಪ್ರಶ್ನೆ ಕೇಳಿಬರುತ್ತಿದೆ. ಸರ್ಕಾರ ಅದರ ವಿವರವನ್ನು ಬಹಿರಂಗ ಮಾಡಬೇಕು. ಅದು ಪ್ರಜಾಪ್ರಭುತ್ವ ವ್ಯವಸ್ಥೆಯ ಜವಾಬ್ದಾರಿ ಎಂದು ಹೇಳಿದೆ. ನಂತರದ ಪ್ರಶ್ನೆ ಮತ್ತು ಚರ್ಚೆ ಭಾರತದ ಪ್ರಜಾಪ್ರಭುತ್ವ ಸ್ವರೂಪದ ಕಡೆ ತಿರುಗಿತು. ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಯಾವ ಪ್ರಶ್ನೆಯೂ ನನಗೆ ಎದುರಾಗಲಿಲ್ಲ. ಬದಲಾದ ಹವಾಮಾನದ ಸಂದರ್ಭದಲ್ಲಿ ಕೃಷಿಗೆ ಸಂಬಂಧಿಸಿ ಮಂಡ್ಯ ಜಿಲ್ಲೆಯ ಕಬ್ಬು ಮತ್ತು ಭತ್ತದ ಉದಾಹರಣೆ ತೆಗೆದುಕೊಂಡೆ. ಯುಪಿಎಸ್‌ಸಿಯಲ್ಲಿ ಸಂದರ್ಶನ ಬಹುಮುಖ್ಯ ಭಾಗ. ಒಂದು ಪೆನ್ ಕೂಡ ಒಳಗೆ ತೆಗೆದುಕೊಂಡು ಹೋಗುವುದಿಲ್ಲ. ಐವರು ಪರಿಣತರ ತಂಡ ನಮ್ಮ ಸುತ್ತ ಕೂತಿರುತ್ತದೆ. ■